# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 547 (639)
**ಮಾನ್ಯ ಸದಸ್ಯರ ಹೆಸರು** : ಶ್ರೀ ಹೆಚ್.ಎಸ್.ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
**ಉತ್ತರಿಸಬೇಕಾದ ದಿನಾಂಕ** : 11-12-2023.
**ಉತ್ತರಿಸುವ ಸಚಿವರು** : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

| ಕ್ರ. ಸಂ | ವಿಷಯ | ಉತ್ತರ |
|---|---|---|
| ಅ) | ಕರ್ನಾಟಕ ರಾಜ್ಯ ವ್ಯಾಪ್ತಿಯಲ್ಲಿರುವ ಸಮುದಾಯ ಆರೋಗ್ಯ ಕೇಂದ್ರಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಸಾರ್ವಜನಿಕ ಆಸ್ಪತ್ರೆಗಳ ಸಂಖ್ಯೆ ಎಷ್ಟು; ಆಸ್ಪತ್ರೆಗಳಲ್ಲಿ ಕಾರ್ಯ ನಿರ್ವಹಿಸಲು ಮಂಜೂರಾಗಿರುವ ಹುದ್ದೆಗಳು ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯ ವ್ಯಾಪ್ತಿಯಲ್ಲಿ 146 ಸಾರ್ವಜನಿಕ ಆಸ್ಪತ್ರೆಗಳು, 9 ನಗರ ಸಮುದಾಯ ಆರೋಗ್ಯ ಕೇಂದ್ರ, 207 ಗ್ರಾಮೀಣ ಸಮುದಾಯ ಆರೋಗ್ಯ ಕೇಂದ್ರಗಳು, 365 ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ 2159 ಗ್ರಾಮೀಣ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಹುದ್ದೆಗಳ ವಿವರವನ್ನು **ಅನುಬಂಧ-1ರಲ್ಲಿ** ನೀಡಲಾಗಿದೆ. |
| ಆ) | ಸಾರ್ವಜನಿಕ ಆಸ್ಪತ್ರೆಗಳಲ್ಲಿ ಹಾಲಿ ಖಾಲಿ ಇರುವ ವೈದ್ಯರ ಕೊರತೆಯಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು; | ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲು ಕೈಗೊಳ್ಳಲಾದ ಕ್ರಮಗಳು ಈ ಕೆಳಕಂಡಂತಿವೆ;<br><br>1. ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳನ್ನು ಹೊರತುಪಡಿಸಿ ರಾಜ್ಯದ ಇತರೆ ಜಿಲ್ಲೆಗಳಲ್ಲಿನ ಗ್ರಾಮೀಣ ಪ್ರದೇಶಗಳ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಖಾಲಿಯಿರುವ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು ಮತ್ತು ತಜ್ಞ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಚಾಲ್ತಿಯಲ್ಲಿರುವ ಸರ್ಕಾರದ ಆದೇಶಗಳಡಿ ಗುತ್ತಿಗೆ ಆಧಾರದ ಮೇಲೆ ಜಿಲ್ಲಾಧಿಕಾರಿಗಳ ಹಂತದಲ್ಲಿ ನಿಯಮಾನುಸಾರ ಭರ್ತಿ ಮಾಡಲು ಸರ್ಕಾರದ ಪತ್ರ ಸಂಖ್ಯೆ: ಆಕುಕ 453 ಹೆಚ್.ಎಸ್. ಹೆಚ್ 2022, ದಿನಾಂಕ: 13.12.2022ರಲ್ಲಿ ಅನುಮತಿ ನೀಡಲಾಗಿದೆ.<br>2. ಇಲಾಖೆಯ ಮುಖಾಂತರ ಸೇವಾನಿರತ ಸ್ನಾತಕೋತ್ತರ ವ್ಯಾಸಂಗ ಪೂರೈಸಿ ಬರುವ ತಜ್ಞ ವೈದ್ಯರನ್ನು ತಜ್ಞತೆ ಹುದ್ದೆಗೆ ನೇಮಿಸಲಾಗುತ್ತಿದೆ.<br>3. ಸ್ನಾತಕೋತ್ತರ ವ್ಯಾಸಂಗವನ್ನು ಪೂರೈಸಿ 1 ವರ್ಷದ ಕಡ್ಡಾಯ ಸೇವೆಗಾಗಿ ಬರುವ ತಜ್ಞ ವೈದ್ಯ ಅಭ್ಯರ್ಥಿಗಳನ್ನು ನೇಮಕ ಮಾಡುವ ಮೂಲಕ ತಜ್ಞರುಗಳ ಕೊರತೆಯನ್ನು ನೀಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |

Scanned with OKEN Scanner

| | | |
|---|---|---|
| | | 4. ರಾಜ್ಯದಲ್ಲಿ ಖಾಲಿಯಿರುವ ತಜ್ಞ ವೈದ್ಯರ / ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳನ್ನು ನೇರನೇಮಕಾತಿ ಮೂಲಕ ಭರ್ತಿ ಮಾಡಲು ಹಾಗೂ ನೇಮಕಾತಿಯಾಗುವವರೆಗೂ ಖಾಲಿಯಿರುವ ತಜ್ಞ ವೈದ್ಯರು / ಆರೋಗ್ಯಾಧಿಕಾರಿಗಳ ಹುದ್ದೆಗಳನ್ನು ಸಂಬಂಧಿಸಿದ ಜಿಲ್ಲಾಧಿಕಾರಿಗಳ ಹಂತದಲ್ಲಿ ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ. |
| ಇ) | ಖಾಸಗಿ ಹೈಟೆಕ್ ಆಸ್ಪತ್ರೆಗಳು ವಿಧಿಸುತ್ತಿರುವ ಅತಿ ಹೆಚ್ಚು ದರಕ್ಕೆ ಕಡಿವಾಣ ಹಾಕಲು ಸರ್ಕಾರ ಕೈಗೊಂಡ ಕ್ರಮಗಳೇನು; | ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ಅಧಿನಿಯಮ, 2017 ತಿದ್ದುಪಡಿ ಸೆಕ್ಷನ್ (15) ಉಪಬಂಧ-1, 2 & 3 ರಲ್ಲಿ ಖಾಸಗಿ ಆಸ್ಪತ್ರೆಗಳು ಅತಿ ಹೆಚ್ಚಿನ ದರ ವಿಧಿಸಿದ್ದಲ್ಲಿ, ಕೆ.ಪಿ.ಎಂ.ಇ ಅಧಿನಿಯಮದಂತೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು. |
| ಈ) | ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳಲು ಸರ್ಕಾರ ಚಿಂತನೆ ಮಾಡಿದೆಯೇ; ಮಾಡಿದ್ದಲ್ಲಿ, ಯಾವ ಕಾಲಮಿತಿಯೊಳಗೆ ನೇಮಕಾತಿ ಮಾಡಿಕೊಳ್ಳಲಾಗುವುದು? (ವಿವರ ನೀಡುವುದು) | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಲ್ಯಾಣ ಕರ್ನಾಟಕ ವೃಂದದಲ್ಲಿ ಖಾಲಿ ಇರುವ ವಿವಿಧ ಅರೆ ವೈದ್ಯಕೀಯ ಹುದ್ದೆಗಳನ್ನು ಭರ್ತಿ ಮಾಡಲು ವಿಶೇಷ ನೇಮಕಾತಿ ಸಮಿತಿಯ ಅಧಿಸೂಚನೆ ಸಂಖ್ಯೆ: ಎಸ್.ಆರ್.ಸಿ/ಕೆ.ಕೆ/14/2022-23 ದಿನಾಂಕ:24.08.2022 ರಲ್ಲಿ ಈ ಕೆಳಕಂಡ ವಿವಿಧ ಅರೆ ವೈದ್ಯಕೀಯ ಹುದ್ದೆಗಳನ್ನು ಭರ್ತಿ ಮಾಡಲು ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಆಯ್ಕೆ ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತದೆ. |

| ಕ್ರ. ಸಂ | ಹುದ್ದೆ | ಅಧಿಸೂಚಿಸಿರುವ ಹುದ್ದೆಗಳ ಸಂಖ್ಯೆ |
|---|---|---|
| 1 | ಸೈಕಾಲಜಿಸ್ಟ್ | 3 |
| 2 | ಸೈಕ್ಯಾಟ್ರಿಕ್ ಸೋಷಿಯಲ್ ವರ್ಕರ್ | 1 |
| 3 | ಮೈಕ್ರೋಬಯಾಲಜಿಸ್ಟ್ | 6 |
| 4 | ಸಹಾಯಕ ಎಂಟಮಾಲಜಿಸ್ಟ್ | 1 |
| 5 | ಫಿಜಿಯೋಥೆರಪಿಸ್ಟ್ | 5 |
| 6 | ಡೆಂಟಲ್ ಮೆಕಾನಿಕ್ | 3 |
| 7 | ಕಿರಿಯ ಪ್ರಯೋಗಶಾಲಾ ತಾಂತ್ರಿಕ ಅಧಿಕಾರಿ | 54 |
| 8 | ನೇತ್ರಾಧಿಕಾರಿ | 15 |
| 9 | ಫಾರ್ಮಸಿ ಅಧಿಕಾರಿ | 98 |
| 10 | ಇ.ಸಿ.ಜಿ. ತಂತ್ರಜ್ಞ | 5 |
| 11 | ಡಯಾಲಿಸ್ ತಂತ್ರಜ್ಞ | 2 |
| 12 | ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ | 126 |
| 13 | ಎಲೆಕ್ಟ್ರೀಷಿಯನ್ | 1 |
| | ಒಟ್ಟು | **320** |

Scanned with OKEN Scanner

ಪ್ರಸ್ತುತ ಆರೋಗ್ಯ ಇಲಾಖೆಯಲ್ಲಿ ಉಳಿಕೆ ಮೂಲ ವೃಂದದಲ್ಲಿ ಖಾಲಿ ಇರುವ ಅರೆ ವೈದ್ಯಕೀಯ ಹುದ್ದೆಗಳನ್ನು ಭರ್ತಿ ಮಾಡಲು ವಿಶೇಷ ನೇಮಕಾತಿ ಸಮಿತಿಯ ಅಧಿಸೂಚನೆ ಸಂಖ್ಯೆ: ಎಸ್.ಆರ್.ಸಿ/ಆರ್.ಪಿ.ಸಿ/15/2022-23, ದಿನಾಂಕ:02.09.2022ರಲ್ಲಿ ಈ ಕೆಳಕಂಡ ಹುದ್ದೆಗಳನ್ನು ಭರ್ತಿ ಮಾಡಲು ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಆಯ್ಕೆ ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತದೆ.

| ಕ್ರ. ಸಂ | ಪದನಾಮ | ಅಧಿಸೂಚಿಸಿದಹುದ್ದೆಗಳ ಸಂಖ್ಯೆ |
|---|---|---|
| 1. | ಫಾರ್ಮಸಿ ಅಧಿಕಾರಿ | 400 |
| 2. | ಕಿರಿಯ ವೈದ್ಯಕೀಯ ಪ್ರಯೋಗ ಶಾಲಾ ತಾಂತ್ರಿಕ ಅಧಿಕಾರಿ | 150 |
| 3. | ವಿಕಿರಣ ಶಾಸ್ತ್ರ ಚಿತ್ರಣ ಅಧಿಕಾರಿ | 08 |
| | ಒಟ್ಟು | **558** |

ಖಾಲಿ ಇರುವ ಕಿರಿಯ ಪ್ರಯೋಗಶಾಲಾ ತಾಂತ್ರಿಕ ಅಧಿಕಾರಿ-150 ಹಾಗೂ ಫಾರ್ಮಸಿ ಅಧಿಕಾರಿ-400 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವವರೆಗೆ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಆಯುಕ್ತಾಲಯದಿಂದ ಸುತ್ತೋಲೆ ಹೊರಡಿಸಲಾಗಿದೆ.

ಮುಂದುವರೆದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ಈ ಕೆಳಕಂಡ ವಿವಿಧ ಅರೆ ವೈದ್ಯಕೀಯ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿಯನ್ನು ನೀಡುವಂತೆ ಸ್ವೀಕೃತವಾದ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

| ಕ್ರ. ಸಂ. | ಪದನಾಮ | ಉಳಿಕೆ ಮೂಲ ವೃಂದ | ಕಲ್ಯಾಣ ಕರ್ನಾಟಕ ವೃಂದ | ಒಟ್ಟು |
|---|---|---|---|---|
| 1 | ಕ್ಲಿನಿಕಲ್ ಇನ್ಸ್‌ಪೆಕ್ಟರ್ | 1 | 0 | 1 |
| 2 | ಸಹಾಯಕ ಕೀಟ ಶಾಸ್ತ್ರಜ್ಞರು | 7 | 2 | 9 |
| 3 | ಮೈಕ್ರೋ ಬಯಾಲಜಿಸ್ಟ್ | 12 | 0 | 12 |
| 4 | ಕ್ಲಿನಿಕಲ್ ಸೈಕಾಲಜಿಸ್ಟ್ | 6 | 2 | 8 |
| 5 | ಮನೋ ಸಾಮಾಜಿಕ ತಜ್ಞರು (ಸೈಕಿಯಾಟ್ರಿಕ್ ಸೋಷಿಯಲ್ | 7 | 0 | 7 |

Scanned with OKEN Scanner

| | | | | | | |
|---|---|---|---|---|---|---|
| | | 6 | ಕಿರಿಯ ರಸಾಯನ ಶಾಸ್ತ್ರಜ್ಞರು | 15 | 3 | 18 |
| | | 7 | ಫಾರ್ಮಸಿ ಅಧಿಕಾರಿ | 640 | 65 | 705 |
| | | 8 | ಶುಶ್ರೂಷಾಧಿಕಾರಿ | 1694 | 351 | 2045 |
| | | 9 | ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ (ಕಿ.ಆ.ಸ. (ಮ) | 3317 | 133 | 3450 |
| | | 10 | ಆರೋಗ್ಯ ನಿರೀಕ್ಷಣಾಧಿಕಾರಿ (ಕಿ.ಆ.ಸ) | 2628 | 221 | 2849 |
| | | 11 | ಕಿರಿಯ ವೈದ್ಯಕೀಯ ಪ್ರಯೋಗ ಶಾಲಾ ತಾಂತ್ರಿಕ ಅಧಿಕಾರಿ | 356 | 57 | 413 |
| | | 12 | ಹಿರಿಯ ವೈದ್ಯಕೀಯ ಪ್ರಯೋಗ ಶಾಲಾ ತಾಂತ್ರಿಕ ಅಧಿಕಾರಿ | 34 | 2 | 36 |
| | | 13 | ಕಿರಿಯ ವೈದ್ಯಕೀಯ ವಿಕಿರಣಶಾಸ್ತ್ರ, ಚಿತ್ರಣ ಅಧಿಕಾರಿ | 59 | 30 | 89 |
| | | 14 | ಹಿರಿಯ ವೈದ್ಯಕೀಯ ವಿಕಿರಣಶಾಸ್ತ್ರ, ಚಿತ್ರಣ ಅಧಿಕಾರಿ | 10 | 0 | 10 |
| | | 15 | ನೇತ್ರಾಧಿಕಾರಿ | 125 | 5 | 130 |
| | | 16 | ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳು | 83 | 6 | 89 |
| | | | **ಒಟ್ಟು** | **8994** | **877** | **9871** |

ಆಕುಕ/639/ಚು.ರ.ಪ್ರ(ವಿ.ಪ)/2023

(ದಿನೇಶ್ ಗುಂಡೂರಾವ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

Scanned with OKEN Scanner

ಪ್ರಶ್ನೆ ಸಂಖ್ಯೆ 547 (639) ಕ್ಕೆ ಅನುಬಂಧ

ರಾಜ್ಯದಲ್ಲಿರುವ ಆರೋಗ್ಯ ಸಂಸ್ಥೆಗಳ ವಿವರ As on 23-11-2023.

| ಕ್ರ. ಸಂ | ಜಿಲ್ಲೆ | ತಾಲ್ಲೂಕು ಆಸ್ಪತ್ರೆ | ಗ್ರಾಮೀಣ ಸಮುದಾಯ ಆರೋಗ್ಯ ಕೇಂದ್ರ | ನಗರ ಸಮುದಾಯ ಆರೋಗ್ಯ ಕೇಂದ್ರ | ಗ್ರಾಮೀಣ ಪ್ರಾಥಮಿಕ ಆರೋಗ್ಯ ಕೇಂದ್ರ | ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ |
|---|---|---|---|---|---|---|
| 1 | ಬೆಂಗಳೂರು ನಗರ (ಬಿಬಿಎಂಪಿ ಹೊರತುಪಡಿಸಿ) | 3 | 5 | 6 | 36 | 160 |
| 2 | ಬೆಂಗಳೂರು ಗ್ರಾಂ | 4 | 2 | 0 | 48 | 2 |
| 3 | ರಾಮನಗರ | 3 | 5 | 0 | 61 | 4 |
| 4 | ಚಿತ್ರದುರ್ಗ | 5 | 11 | 0 | 80 | 5 |
| 5 | ದಾವಣಗೆರೆ | 4 | 4 | 0 | 80 | 11 |
| 6 | ಕೋಲಾರ | 4 | 2 | 0 | 63 | 9 |
| 7 | ಚಿಕ್ಕಬಳ್ಳಾಪುರ | 5 | 2 | 0 | 57 | 4 |
| 8 | ಶಿವಮೊಗ್ಗ | 6 | 7 | 0 | 93 | 14 |
| 9 | ತುಮಕೂರು | 9 | 4 | 0 | 144 | 6 |
| 10 | ಬಾಗಲಕೋಟೆ | 5 | 8 | 0 | 48 | 7 |
| 11 | ಬೆಳಗಾವಿ | 9 | 16 | 0 | 139 | 12 |
| 12 | ವಿಜಯಪುರ | 4 | 9 | 0 | 63 | 6 |
| 13 | ಧಾರವಾಡ | 3 | 0 | 0 | 34 | 19 |
| 14 | ಗದಗ | 4 | 2 | 0 | 39 | 3 |
| 15 | ಹಾವೇರಿ | 6 | 5 | 0 | 69 | 4 |
| 16 | ಉ.ಕನ್ನಡ | 10 | 3 | 0 | 82 | 3 |
| 17 | ಬಳ್ಳಾರಿ | 2 | 6 | 0 | 30 | 9 |
| 18 | ವಿಜಯನಗರ | 5 | 7 | 0 | 49 | 5 |
| 19 | ಬೀದರ್ | 4 | 8 | 0 | 53 | 6 |
| 20 | ಕಲಬುರಗಿ | 6 | 16 | 0 | 84 | 15 |
| 21 | ಯಾದಗಿರಿ | 2 | 6 | 0 | 41 | 3 |
| 22 | ಕೊಪ್ಪಳ | 3 | 9 | 0 | 46 | 3 |
| 23 | ರಾಯಚೂರು | 4 | 6 | 0 | 50 | 6 |
| 24 | ಚಾಮರಾಜನಗರ | 3 | 3 | 0 | 60 | 2 |
| 25 | ಚಿಕ್ಕಮಗಳೂರು | 6 | 5 | 0 | 89 | 2 |
| 26 | ದಕ್ಷಿಣ ಕನ್ನಡ | 4 | 8 | 1 | 65 | 12 |
| 27 | ಹಾಸನ | 7 | 15 | 0 | 134 | 4 |
| 28 | ಕೊಡಗು | 2 | 7 | 0 | 29 | 1 |
| 29 | ಮಂಡ್ಯ | 6 | 10 | 0 | 113 | 3 |
| 30 | ಮೈಸೂರು | 6 | 10 | 2 | 118 | 23 |
| 31 | ಉಡುಪಿ | 2 | 6 | 0 | 62 | 2 |
| | ರಾಜ್ಯದ ಒಟ್ಟು | 146 | 207 | 9 | 2159 | 365 |

ಸಹ ನಿರ್ದೇಶಕರು,
(ಆರೋಗ್ಯ ಮತ್ತು ಯೋಜನೆ),
ಆರೋಗ್ಯ ಮತ್ತು ಕು.ಕ.ಸೇವೆಗಳು,
ಬೆಂಗಳೂರು.

Scanned with OKEN Scanner

ಅನುಬಂಧ - ೨



(ಎ) ಸಾರ್ವಜನಿಕ ಪ್ರಾಧಿಕಾರದ ನಿರ್ದೇಶನದ ಮೇಲೆ ಚಿಕಿತ್ಸೆ ಅಥವಾ ಪರೀಕ್ಷೆ ಅಥವಾ ನಿರ್ಧಾರಣೆಗಳನ್ನು ನಡೆಸಿದ್ದು ಮತ್ತು ಮಾಹಿತಿಯನ್ನು ಸ್ವೀಕರಿಸುವ ಪ್ರಥಮ ಅಧಿಕಾರ ಅದಕ್ಕೆ ಇದೆಯೆಂದು;

(ಬಿ) ವ್ಯಕ್ತಿಗೆ ನೀಡುವ ವರದಿಯು ವ್ಯಕ್ತಿ ಅಥವಾ ಆತನ ಕುಟುಂಬದ ಸದಸ್ಯರುಗಳಿಗೆ ಬಾಧೆ ಉಂಟುಮಾಡುವುದೆಂದು.

– ಆತನಿಗೆ ಮನವರಿಕೆಯಾದರೆ ಅಂಥ ಕಾರಣಗಳನ್ನು ಬರೆದು ದಾಖಲುಮಾಡಿ ಚಿಕಿತ್ಸೆ ದಾಖಲೆಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಒದಗಿಸಲು ತಿರಸ್ಕರಿಸಬಹುದು.

15. [1][ಉಲ್ಲಂಘನೆ ಅಥವಾ][1] **ನೋಂದಣಿಯ ಅಮಾನತು ಅಥವಾ ರದ್ದತಿ.**– [1][(1) 7ನೇ ಪ್ರಕರಣದ (8)ನೇ ಉಪಪ್ರಕರಣದ ಅಡಿಯಲ್ಲಿ ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು ನೀಡಿದ ಯಾವುವೇ ನಿರ್ದೇಶನಗಳನ್ನು ಅನುಪಾಲಿಸಲು ವಿಫಲವಾಗುವ ಯಾವುದೇ ಖಾಸಗಿ ವೈದ್ಯಕೀಯ ಸಂಸ್ಥೆಯ ಸಂದರ್ಭದಲ್ಲಿ, ಪ್ರಾಧಿಕಾರವು, ಆ ಸಂಸ್ಥೆಗೆ ಅಹವಾಲನ್ನು ಹೇಳಿಕೊಳ್ಳುವ ಅವಕಾಶವೊಂದನ್ನು ನೀಡಿದ ನಂತರ, ಐವತ್ತು ಸಾವಿರ ರೂಪಾಯಿಗಳಿಗಿಂತ ಮೀರದಂತೆ ದಂಡವನ್ನು ವಿಧಿಸಬಹುದು ಮತ್ತು ಅನುಪಾಲನೆಗೆ ಸಮಯವನ್ನು ನೀಡಬಹುದು ಅಥವಾ ಸಂಸ್ಥೆಯ ನೋಂದಣಿಯನ್ನು ರದ್ದುಗೊಳಿಸಲು ಮುಂದಾಗಬಹುದು.

(2) ಹೆಚ್ಚಿನ ಶುಲ್ಕ ವಿಧಿಸುವುದಕ್ಕೆ ಸಂಬಂಧಿಸಿದಂತೆ ರೋಗಿಯು ಮಾಡಿದ ದೂರನ್ನು 8ನೇ ಪ್ರಕರಣದ (3)ನೇ ಉಪಪ್ರಕರಣದ ಅಡಿಯಲ್ಲಿ ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು ವಿಚಾರಣೆ ನಡೆಸಿದ ತರುವಾಯ, ಖಾಸಗಿ ವೈದ್ಯಕೀಯ ಸಂಸ್ಥೆಯು, 10ನೇ ಪ್ರಕರಣದ (2), (4) ಅಥವಾ (5)ನೇ ಉಪಪ್ರಕರಣದಲ್ಲಿನ ಉಪಬಂಧಗಳನ್ನು ಉಲ್ಲಂಘಿಸಿರುವುದು ಕಂಡುಬಂದಲ್ಲಿ, ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು, ಆ ಸಂಸ್ಥೆಗೆ ಅಹವಾಲನ್ನು ಹೇಳಿಕೊಳ್ಳುವ ಅವಕಾಶವೊಂದನ್ನು ನೀಡಿದ ತರುವಾಯ, ವಿಧಿಸಿದ ಹೆಚ್ಚಿನ ಶುಲ್ಕದ ಮೊತ್ತಕ್ಕಿಂತ ಒಂದೂವರೆಪಟ್ಟು ಮೊತ್ತಕ್ಕೆ ಸಮನಾದ ದಂಡವನ್ನು ವಿಧಿಸತಕ್ಕದ್ದು. ದಂಡದ ಮೊತ್ತದಿಂದ ಹೆಚ್ಚಾಗಿ ವಿಧಿಸಿದ ಮೊತ್ತಕ್ಕೆ ಸಮನಾದ ಮೊತ್ತವನ್ನು ರೋಗಿಗೆ ಸಂದಾಯ ಮಾಡತಕ್ಕದ್ದು ಮತ್ತು ಉಳಿದುದನ್ನು ಸಾರ್ವಜನಿಕ ಆರೋಗ್ಯ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವುದಕ್ಕಾಗಿ ಜಿಲ್ಲೆಯ ಆರೋಗ್ಯ ರಕ್ಷಾ ಸಮಿತಿಯಲ್ಲಿ ಜಮೆ ಮಾಡತಕ್ಕದ್ದು:

ಪರಂತು, ಒಂದು ನಿರ್ದಿಷ್ಟ ಖಾಸಗಿ ವೈದ್ಯಕೀಯ ಸಂಸ್ಥೆಯು ಹಾಗೆ ಹೆಚ್ಚಿನ ಶುಲ್ಕವನ್ನು ವಿಧಿಸಿದ ಸಂದರ್ಭದಲ್ಲಿ, ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು, 8ನೇ ಪ್ರಕರಣದ (3)ನೇ ಉಪಪ್ರಕರಣದ ಅಡಿಯಲ್ಲಿ ಅಂಥ ವಿಚಾರಣೆಯನ್ನು ನಡೆಸಿದ ತರುವಾಯ, ಖಾಸಗಿ ವೈದ್ಯಕೀಯ ಸಂಸ್ಥೆಯು 10ನೇ ಪ್ರಕರಣದ ಉಪಬಂಧಗಳನ್ನು ಒಂದು ಕ್ಯಾಲೆಂಡರ್ ವರ್ಷದಲ್ಲಿ ಮೂರನೇ ಬಾರಿಗೆ ಉಲ್ಲಂಘಿಸಿರುವುದು ಕಂಡುಬಂದಲ್ಲಿ, ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಳ್ಳುವುದಕ್ಕಾಗಿ ಮತ್ತು ತರುವಾಯದ ಕಾನೂನು ಕ್ರಮ ಕೈಗೊಳ್ಳಲು ಸಂಬಂಧಪಟ್ಟ ನ್ಯಾಯಾಲಯಕ್ಕೆ ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು ಲಿಖಿತದಲ್ಲಿ ದೂರನ್ನು ಸಲ್ಲಿಸತಕ್ಕದ್ದು. ಅಪರಾಧ ರುಜುವಾತಾದ ನಂತರ, ಸಂಬಂಧಪಟ್ಟ ಖಾಸಗಿ ವೈದ್ಯಕೀಯ ಸಂಸ್ಥೆಯು, ಅದು ವಿಧಿಸಿದ ಹೆಚ್ಚಿನ ಶುಲ್ಕದ ಮೊತ್ತದ ಮೂರರಷ್ಟು ಮೊತ್ತಕ್ಕೆ ವಿಸ್ತರಿಸಬಹುದಾದ ಮೊತ್ತ ಅಥವಾ ಒಂದು ಲಕ್ಷ ರೂಪಾಯಿಗಳ ಮೊತ್ತ ಇವುಗಳಲ್ಲಿ ಯಾವುದು ಹೆಚ್ಚೋ ಆ ಮೊತ್ತದಷ್ಟು ದಂಡಕ್ಕೆ ಹೊಣೆಯಾಗತಕ್ಕದ್ದು.

(3) ಹೆಚ್ಚಿನ ಶುಲ್ಕ ವಿಧಿಸುವುದನ್ನು ಹೊರತುಪಡಿಸಿ, ರೋಗಿಯ ಚಾರ್ಟರ್ ಅಥವಾ ಖಾಸಗಿ ವೈದ್ಯಕೀಯ ಸಂಸ್ಥೆಯ ಚಾರ್ಟರ್‌ನಲ್ಲಿ ಯಾವುದೇ ವಿಷಯಕ್ಕೆ ಸಂಬಂಧಪಟ್ಟಂತೆ, ರೋಗಿಯಿಂದ ದೂರನ್ನು ಸ್ವೀಕರಿಸಿದ ಸಂದರ್ಭದಲ್ಲಿ, ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು, 11ಎ ಪ್ರಕರಣದ ಉಪಬಂಧಗಳನ್ನು ಖಾಸಗಿ ವೈದ್ಯಕೀಯ ಸಂಸ್ಥೆಗಳು ಉಲ್ಲಂಘಿಸಿರುವುದು ಕಂಡುಬಂದಲ್ಲಿ, ಸಂಬಂಧಪಟ್ಟ ಖಾಸಗಿ ವೈದ್ಯಕೀಯ ಸಂಸ್ಥೆಗೆ ಅಹವಾಲನ್ನು ಹೇಳಿಕೊಳ್ಳುವ ಅವಕಾಶವೊಂದನ್ನು ನೀಡಿದ ತರುವಾಯ, ಒಂದು ಕ್ಯಾಲೆಂಡರ್ ವರ್ಷದ ಅವಧಿಯಲ್ಲಿ, ಮೊದಲನೇ

Scanned with OKEN Scanner

ಸಲ ಪಾಲಿಸದೇ ಇರುವುದಕ್ಕೆ ಹತ್ತು ಸಾವಿರ ರೂಪಾಯಿಗಳ ದಂಡವನ್ನು ಮತ್ತು ಎರಡನೇ ಸಲ ಪಾಲಿಸದೇ ಇರುವುದಕ್ಕೆ ಇಪ್ಪತ್ತೈದು ಸಾವಿರ ರೂಪಾಯಿಗಳ ದಂಡವನ್ನು ವಿಧಿಸತಕ್ಕದ್ದು. ದಂಡದ ಮೊತ್ತದ ಶೇಕಡ ಐವತ್ತರಷ್ಟು ಮೊತ್ತವನ್ನು ರೋಗಿಗೆ ಸಂದಾಯ ಮಾಡತಕ್ಕದ್ದು ಮತ್ತು ಉಳಿದ ಶೇಕಡ ಐವತ್ತರಷ್ಟು ಮೊತ್ತವನ್ನು ಸಾರ್ವಜನಿಕ ಆರೋಗ್ಯ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವುದಕ್ಕಾಗಿ ಜಿಲ್ಲೆಯ ಆರೋಗ್ಯ ರಕ್ಷಾ ಸಮಿತಿಯಲ್ಲಿ ಜಮೆ ಮಾಡತಕ್ಕದ್ದು:

ಪರಂತು, ಒಂದು ಕ್ಯಾಲೆಂಡರ್ ವರ್ಷದಲ್ಲಿ ಮೂರನೇ ಬಾರಿಗೆ ಒಂದು ನಿರ್ದಿಷ್ಟ ಖಾಸಗಿ ವೈದ್ಯಕೀಯ ಸಂಸ್ಥೆಯ ವಿರುದ್ಧದ ಅಂಥ ದೂರಿನ ಸಂದರ್ಭದಲ್ಲಿ, ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಳ್ಳುವುದಕ್ಕಾಗಿ ಮತ್ತು ತರುವಾಯದ ಕಾನೂನು ಕ್ರಮ ಕೈಗೊಳ್ಳಲು ಸಂಬಂಧಪಟ್ಟ ನ್ಯಾಯಾಲಯಕ್ಕೆ ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು ಲಿಖಿತ ದೂರನ್ನು ಸಲ್ಲಿಸತಕ್ಕದ್ದು. ಅಪರಾಧ ರುಜುವಾತಾದ ನಂತರ, ಸಂಬಂಧಪಟ್ಟ ಖಾಸಗಿ ವೈದ್ಯಕೀಯ ಸಂಸ್ಥೆಯು, ಐವತ್ತು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ದಂಡಕ್ಕೆ ಹೊಣೆಯಾಗತಕ್ಕದ್ದು.][1]

[2][(5)][2] [3][ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರ][3]ವು, ದೂರಿನ ಆಧಾರದ ಮೇಲೆ ಅಥವಾ ಅನ್ಯಥಾ, ಈ ಅಧಿನಿಯಮದ ಅಥವಾ ಅದರಡಿಯಲ್ಲಿ ರಚಿಸಿದ ನಿಯಮಗಳ ಅಥವಾ ನೋಂದಣಿಯ ಷರತ್ತುಗಳ ಉಲ್ಲಂಘನೆಯಾಗಿದೆಯೆಂದು ಮೇಲ್ನೋಟಕ್ಕೆ ಕಂಡುಬಂದರೆ, ಲಿಖಿತದಲ್ಲಿ ಆದೇಶವನ್ನು ನೀಡುವ ಮೂಲಕ ಮತ್ತು ಅದರಲ್ಲಿ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸುವ ಮೂಲಕ ಖಾಸಗಿ ವೈದ್ಯಕೀಯ ಸಂಸ್ಥೆಯ ನೋಂದಣಿಯನ್ನು ಅಮಾನತುಗೊಳಿಸಬಹುದು ಅಥವಾ ರದ್ದುಗೊಳಿಸಬಹುದು:

ಪರಂತು, ಅಂಥ ಆದೇಶವನ್ನು ಖಾಸಗಿ ವೈದ್ಯಕೀಯ ಸಂಸ್ಥೆಯು ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡಿದ ಹೊರತು [1][ಮತ್ತು ಒಳರೋಗಿಗಳಿಗೆ ತಡೆರಹಿತವಾದ ಆರೋಗ್ಯ ರಕ್ಷಣೆಯನ್ನು ಯುಕ್ತ ಸಮಯದೊಳಗೆ ಮಾಡಲು ವ್ಯವಸ್ಥೆಗಳನ್ನು ಮಾಡಲಾಗಿದೆಯೆಂದು ಖಚಿತಪಡಿಸಿಕೊಂಡ ಹೊರತು][1] ಹೊರಡಿಸತಕ್ಕದ್ದಲ್ಲ.

[2][(6)][2] (1)ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಿದ ಪ್ರತಿಯೊಂದು ಆದೇಶವು ಖಾಸಗಿ ವೈದ್ಯಕೀಯ ಸಂಸ್ಥೆಯ ಒಳರೋಗಿಗಳನ್ನು ಆದೇಶದಲ್ಲಿ ನಿರ್ದಿಷ್ಟಪಡಿಸಿದ ಇನ್ನೊಂದು ಖಾಸಗಿ ವೈದ್ಯಕೀಯ ಸಂಸ್ಥೆಗೆ ವರ್ಗಾಯಿಸಬೇಕೆಂಬ ನಿರ್ದೇಶನವನ್ನು ಒಳಗೊಂಡಿರತಕ್ಕದ್ದು ಮತ್ತು ಅಂಥ ವರ್ಗಾವಣೆ ಮಾಡುವವರೆಗೂ ಅಂಥ ಒಳರೋಗಿಗಳ ಆರೋಗ್ಯಪಾಲನೆ ಹಾಗೂ ಅಭಿರಕ್ಷಣೆ ಕುರಿತ ಉಪಬಂಧಗಳನ್ನು ಸಹ ಒಳಗೊಂಡಿರತಕ್ಕದ್ದು.

[2][(7)][2] (1)ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಿದ ಪ್ರತಿಯೊಂದು ಆದೇಶವು,

(ಎ) 17ನೇ ಪ್ರಕರಣದ ಅಡಿಯಲ್ಲಿ ಅಂಥ ಆದೇಶದ ವಿರುದ್ಧ ಯಾವ ಅಪೀಲನ್ನೂ ಸಲ್ಲಿಸದಿದ್ದಾಗ, ಅಂಥ ಅಪೀಲು ಸಲ್ಲಿಸಲು ನಿರ್ದಿಷ್ಟಪಡಿಸಿದ ಅವಧಿಯು ಮುಕ್ತಾಯವಾದ ಕೂಡಲೆ; ಮತ್ತು

(ಬಿ) ಅಂಥ ಅಪೀಲನ್ನು ಸಲ್ಲಿಸಿದ್ದು ಅದು ವಜಾ ಆಗಿರುವಾಗ ಹಾಗೆ ವಜಾ ಮಾಡಿದ ಆದೇಶದ ದಿನಾಂಕದಿಂದ,

– ಪರಿಣಾಮಕಾರಿಯಾಗತಕ್ಕದ್ದು.

(1) 2018ರ ಅಧಿನಿಯಮ ಸಂಖ್ಯೆ 01ರ ಮೂಲಕ ದಿನಾಂಕ: 04.04.2019 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ

(2) 2018ರ ಅಧಿನಿಯಮ ಸಂಖ್ಯೆ 01ರ ಮೂಲಕ ದಿನಾಂಕ: 04.04.2019 ರಿಂದ ಜಾರಿಗೆ ಬರುವಂತೆ ಮರುಸಂಖ್ಯೆ ನೀಡಲಾಗಿದೆ.

(3) 2018ರ ಅಧಿನಿಯಮ ಸಂಖ್ಯೆ 01ರ ಮೂಲಕ ದಿನಾಂಕ: 04.04.2019ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

Scanned with OKEN Scanner